ತಾರಾನಾಥ ಶಿಕ್ಷಣ ಸಂಸ್ಥೆಯ

# ಲಕ್ಷ್ಮೀ ವೆಂಕಟೇಶ ದೇಸಾಯಿ ಮಹಾವಿದ್ಯಾಲಯ

# ರಾಯಚೂರು-584103.

## 2021-22 ನೇ ಸಾಲಿನ ದೈನಂದಿನ ಚಟುವಟಿಕೆಗಳು.

ದಿನಾಂಕ 12-01-2022 ರಂದು ಸ್ವಾಮಿ ವಿವೇಕಾನಂದರ ಜನ್ಮದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿತ್ತು, ಈ ಕಾರ್ಯಕ್ರಮವನ್ನು ರಾಷ್ಟ್ರೀಯ ಯುವ ದಿನಾಚರಣೆಯನ್ನಾಗಿ ಆಚರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಉಪಪ್ರಾಚಾರ್ಯರಾದ ಡಾ. ಆಂಜನೇಯ ಓಬಳೇಶ ಇವರು ಮಾತನಾಡುತ್ತ ಯುವಕರು ಇವರಂತಹ ಮಹಾನ ವ್ಯಕ್ತಿಗಳ ಆದರ್ಶವನ್ನು ಎಲ್ಲಾ ವಿದ್ಯಾರ್ಥಿಗಳು ಅಳವಡಿಸಿಕೊಳ್ಳಬೇಕೆಂದು ಹೇಳಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕಾಲೇಜಿನ ಪ್ರಾಚಾರ್ಯರಾದ ಡಾ. ವೆಂಕಟೇಶ ಬಿ. ದೇವರು ಇವರು ಮಾತನಾಡುತ್ತ ವಿವೇಕಾನಂದರ ಬದುಕಿನ ರೀತಿ ನಮ್ಮ ದೇಶದ ಪ್ರತಿಯೊಬ್ಬರು ಇದನ್ನು ಅಳವಡಿಸಿಕೊಂಡರೆ ಅಂತಹವರ ಆತ್ಮಕ್ಕೆ ಶಾಂತಿ ಸಿಗುತ್ತದೆ ಎಂದು ಹೇಳಿದರು.

ಈ ಕಾರ್ಯಕ್ರಮವನ್ನು ಸ್ವಾತಿ . ಇವರು ನಿರೂಪಿಸಿದರು, ಎನ್.ಎಸ್.ಎಸ್ ಕಾರ್ಯಕ್ರಮಾಧಿಕಾರಿಗಳು ಪ್ರಾಸ್ತಾವಿಕಾಗಿ ಮಾತನಾಡಿದರು. ಪ್ರಾರ್ಥನೆ ಗೀತೆಯನ್ನು ಅಂಜಲಿ ಹಾಡಿದರು. ವಂಚನಾರ್ಪಣೆಯನ್ನು ಸ್ವಾತಿ ಮಾಡಿದರು. ಈ ಕಾರ್ಯಕ್ರಮದಲ್ಲಿ ಬೋಧಕ-ಬೋಧಕೇತರ ಸಿಬ್ಬಂದಿಗಳು ಕೂಡ ಉಪಸ್ಥಿತರಿದ್ದರು.

ದಿನಾಂಕ 25-01-2022 ಎನ್.ಎಸ್.ಎಸ್. ದೈನಂದಿನ ವಾರ್ಷಿಕ ಚಟುವಟಿಕೆಗಳನ್ನು ಉದ್ಘಾಟನೆ ಮಾಡುವ ಮೂಲಕ ಚಾಲನೆ ನೀಡಲಾಯಿತು. ಈ ಕಾರ್ಯಕ್ರಮದಲ್ಲಿ ಟಿ.ಎಸ್.ಎಸ್.ನ ಉಪಾಧ್ಯಕ್ಷರಾದ ಶ್ರೀ ಬಸ್ಸಪ್ಪ ತಿಪ್ಪಾರೆಡ್ಡಿ ಇವರು ಚಾಲನೆಯನ್ನು ನೀಡಿ ಮಾತನಾಡುತ್ತ ಉತ್ತಮ ಸಂಸ್ಕಾರ ಕಲಿಯಲಿಕ್ಕೆ, ಸದೃಢ ಭಾರತವನ್ನು ನಿರ್ಮಾಣ ಮಾಡಲಿಕ್ಕೆ ಇಂತಹ ಎನ್.ಎಸ್.ಎಸ್. ಕಾರ್ಯಕ್ರಮಗಳು ಇಂದಿನ ಯುವ ಪೀಳಿಗೆಗೆ ಅವಶ್ಯಕತೆ ಇದೆ ಎಂದು ಹೇಳಿದರು. ಈ ಕಾರ್ಯಕ್ರಮದಲ್ಲಿ ಉಪನ್ಯಾಸಕರಾಗಿ ಆಗಮಿಸಿದ್ದ ಡಾ. ಶ್ರೀನಿವಾಸ ರಾಯಚೂರಕರ್ ಇವರು ಮಾತನಾಡುತ್ತ ವಿದ್ಯಾರ್ಥಿಗಳಿಗೆ ಒಳ್ಳೆಯ ಮಾರ್ಗಕ್ಕೆ ಕೊಂಡೊಯ್ಯುವುದು, ಸಮಾಜಮುಖಿ ಕಾರ್ಯ ಮಾಡಲಿಕ್ಕೆ ಸೇವೆಗಳ ಮೂಲಕ ಶಿಕ್ಷಣ ಉತ್ತಮ ಸಂಸ್ಕಾರ ಕಲಿಯಲಿಕ್ಕೆ ಯುವಜನರು ಮುಂದಾಗಬೇಕು. ಸದೃಢ ಭಾರತವನ್ನು ನಿರ್ಮಾಣ ಮಾಡುವಲ್ಲಿ ತಮ್ಮ ಪಾತ್ರ ಬಹಳ ಮುಖ್ಯ ಎಂದು ಹೇಳಿದರು. ಉಪ ಪ್ರಾಚಾರ್ಯರಾದ ಡಾ. ಆಂಜನೇಯ ಓಬಳೇಶ ಉಪಸ್ಥಿತರಿದ್ದರು. ಕಾಲೇಜಿನ ಪ್ರಾಚಾರ್ಯರಾದ ಡಾ. ವೆಂಕಟೇಶ ಬಿ. ದೇವರು ಇವರು ಅಧ್ಯಕ್ಷೀಯ ಭಾಷಣ ಮಾಡಿದರು. ಇಮ್ಮಾನ್ಯುಯೆಲ್ ಕಾರ್ಯಕ್ರಮವನ್ನು ನಿರೂಪಿಸಿದರು. ಭಾಗ್ಯಶ್ರೀ ಪ್ರಾರ್ಥನೆಯನ್ನು ಮಾಡಿದರು ತನುಶ್ರೀ ಸ್ವಾಗತ ಮಾಡಿದರೆ, ಆಂಜನೇಯ ಇವರು ವಮದನಾರ್ಪಣೆಯನ್ನು ಮಾಡಿದರು.

ದಿನಾಂಕ 03-02-2022 ರಂದು ಕಾಲೇಜಿನ ಎನ್.ಎಸ್.ಎಸ್. ಶಿಬಿರದ ಸ್ವಯಂ ಸೇವಕರಿಗೆ ಅಭಿವಿನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಎನ್.ಎಸ್.ಎಸ್.ನ ಧ್ಯೇಯ, ಉದ್ದೇಶಗಳು, ಇದರಿಂದ ವಿದ್ಯಾರ್ಥಿಗಳಿಗೆ ಯಾವ ರೀತಿ ಪ್ರಯೋಜನ ಆಗುತ್ತದೆ ಎಂದು ಹೇಳಿಕೊಡಲಾಯಿತು. ಈ ಕಾರ್ಯಕ್ರಮದಲ್ಲಿ ಪ್ರಾಚಾರ್ಯರಾದ ಡಾ. ವೆಂಕಟೇಶ ಬಿ. ದೇವರು ಇವರು ಅಧ್ಯಕ್ಷತೆಯನ್ನು ವಹಿಸಿದ್ದರು.

ದಿನಾಂಕ 04-08-2022 ರಂದು ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಕಾಲೇಜಿನ ಆವರಣದಲ್ಲಿ 75 ಸಸಿಗಳನ್ನು ನೆಡಲಾಯಿತು. ಈ ಕಾರ್ಯಕ್ರಮಕ್ಕೆ ನಮ್ಮ ಕಾಲೇಜಿನ ಆಡಳಿತ ಮಂಡಳಿಯ ಅಧ್ಯಕ್ಷರಾದ ಪವನ ಸುಖಾಣಿ, ಕಾರ್ಯದರ್ಶಿಗಳಾದ ಜಟ್ರಂ ಶ್ರೀನಿವಾಸ, ಸಂಸ್ಥೆಯ ಜಂಟಿ ಕಾರ್ಯದರ್ಶಿಗಳಾದ ಅಂಬಾಪತಿ ಪಾಟೀಲ, ಪ್ರಾಚಾರ್ಯರು ಮುಂತಾದವರು ಭಾಗವಹಿಸಿ ಸಸಿಗಳನ್ನು ನೆಟ್ಟರು.

ದಿನಾಂಕ 14-08-2022 ರಂದು ಸ್ವಾತಂತ್ರ್ಯ ದಿನೋತ್ಸವದ ಅಂಗವಾಗಿ ಕಾಲೇಜಿನ ಆವರಣದಲ್ಲಿ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಅನೇಕ ವಿದ್ಯಾರ್ಥಿಗಳು ಭಾಗವಹಿಸಿ ಶ್ರಮದಾನವನ್ನು ಮಾಡಿದರು.

ದಿನಾಂಕ 28-09-2022 ರಂದು ರಾಷ್ಟ್ರೀಯ ಸೇವಾ ಯೋಜನೆಯ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಡಾ. ಆಂಜನೇಯ ಓಬಳೇಶ, ಉಪಪ್ರಾಚಾರ್ಯರು, ಇವರು ಭಾಗವಹಿಸಿ ಎನ್.ಎಸ್.ಎಸ್.ನ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿದರು. ಎನ್.ಎಸ್.ಎಸ್. ಧ್ಯೇಯೋದ್ದೇಶಗಳನ್ನು ಕುರಿತು ವಿದ್ಯಾರ್ಥಿಗಳಿಗೆ ಮನಮುಟ್ಟುವಂತೆ ತಿಳಿಸಿ ಹೇಳಿದರು. ಪ್ರಾಚಾರ್ಯರು ಅಧ್ಯಕ್ಷತೆ ವಹಿಸಿದ್ದರು. ವಿದ್ಯಾರ್ಥಿಗಳು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯವರು ಉಪಸ್ಥಿತರಿದ್ದರು.

ದಿನಾಂಕ 29-09-2022 ರಂದು ಕಾಲೇಜಿನ ಆವರಣದಲ್ಲಿ ಶ್ರಮದಾನವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಸುಮಾರು 70 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕಾಲೇಜಿನಲ್ಲಿ ಅನೇಕ ಕಡೆ ಸ್ವಚ್ಛತಾ ಕಾರ್ಯವನ್ನು ಮಾಡಲಾಯಿತು.

ದಿನಾಂಕ 28-10-2022 ರಂದು ಕೋಟಿ ಕಂಠ ಗಾಯನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಮಾಣಿಕನಗರದಲ್ಲಿ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಬಡಾವಣೆಯಲ್ಲಿ ಪ್ಲಾಸ್ಟಿಕ್‌ಗಳನ್ನು ಆರಿಸುವುದರ ಮೂಲಕ ಸ್ವಚ್ಛಗೊಳಿಸಲಾಯಿತು.

ದಿನಾಂಕ 25-01-2023 ರಾಯಚೂರು ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ಯೂತ್ ಪಾರ್ಲಿಮೆಂಟ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮಕ್ಕೆ ನಮ್ಮ ಎನ್.ಎಸ್.ಎಸ್ ಘಟಕದಿಂದ ಸುಮಾರು 25 ವಿದ್ಯಾರ್ಥಿಗಳು ಭಾಗವಹಿಸಿದ್ದರು.

ದಿನಾಂಕ 31-01-2023 ರಂದು ನಮ್ಮ ಕಾಲೇಜಿನ ಒಳಗಡೆ ಪ್ರಾಣಿಶಾಸ್ತ್ರ ವಿಭಾಗದ ಮುಂಭಾಗದಲ್ಲಿ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಸುಮಾರು 75 ವಿದ್ಯಾರ್ಥಿಗಳು ಭಾಗವಹಿಸಿ ಸುಮಾರು 4 ಗಂಟೆಗಳ ಅವಧಿ ಕಾರ್ಯವನ್ನು ಮಾಡಿದರು.

ತಾರಾನಾಥ ಶಿಕ್ಷಣ ಸಂಸ್ಥೆಯ

# ಲಕ್ಷ್ಮೀ ವೆಂಕಟೇಶ ದೇಸಾಯಿ ಮಹಾವಿದ್ಯಾಲಯ

## ರಾಯಚೂರು-584103.

## <u>ಎನ್.ಎಸ್.ಎಸ್. ವಾರ್ಷಿಕ ವಿಶೇಷ ಶಿಬಿರ 2021-22</u>

## 30-06-2022 ರಿಂದ 06-07-2022

### ಬಾಯಿದೊಡ್ಡಿ, ಕುರುಬದೊಡ್ಡಿ, ಕಡಗಂದಿನ್ನಿ, ಗೌಸ್‌ನಗರ, ತಾ/ಜಿ: ರಾಯಚೂರು.

ದಿನಾಂಕ 30-06-2022 ರಂದು ರಾಯಚೂರು ತಾಲೂಕಿನ ಎಲ್.ವಿ.ಡಿ. ಮಹಾವಿದ್ಯಾಲಯದ ಎನ್.ಎಸ್.ಎಸ್. ಘಟಕದ ದತ್ತು ಗ್ರಾಮವಾದ ಬಾಯಿದೊಡ್ಡಿಯಲ್ಲಿ ಎನ್.ಎಸ್.ಎಸ್. ವಾರ್ಷಿಕ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮವು ಗ್ರಾಮದ ಮುಖಂಡರಾದ ಶ್ರೀ. ನರಸಣ್ಣ ಇವರು ಸಸಿಗೆ ನೀರೆರಯುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಉದ್ಘಾಟನೆ ಮಾಡಿ ಮಾತನಾಡುತ್ತ ಗ್ರಾಮದ ಏಳಿಗೆಗೆ ನಿಮ್ಮ ಸಹಕಾರ ಮತ್ತು ಬೆಂಬಲ ಅವಶ್ಯಕತೆ ಇದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಗ್ರಾಮದ ಇತರ ಮುಖಂಡರು ಪಾಲ್ಗೊಂಡಿದ್ದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಉಪ ಪ್ರಾಚಾರ್ಯರಾದ ಪ್ರೊ. ಮಹಮೂದ್ ಟಿ. ಇವರು ವಹಿಸಿಕೊಂಡಿದ್ದರು. ಕಾರ್ಯಕ್ರಮವನ್ನು ತನುಶ್ರೀ ನಿರೂಪಿಸಿದರು. ಭಾಗ್ಯಶ್ರೀ ಸ್ವಾಗತಿಸಿದರು. ಇಮ್ಮಾನುವೆಲ್ ವಂದಿಸಿದರು. ಚೆನ್ನಾರೆಡ್ಡಿ ಎಸ್., ಎನ್.ಎಸ್.ಎಸ್. ಅಧಿಕಾರಿ ಇವರು ಪ್ರಾಸ್ತಾವಿಕವಾಗಿ ಮಾತನಾಡಿದರು.

ದಿನಾಂಕ 01-07-2022 ರಂದು ಗೌಸ್‌ನಗರ ಗ್ರಾಮದಲ್ಲಿ ಬೆಳಿಗ್ಗೆ ಸರ್ವೆ ಕಾರ್ಯವನ್ನು ಕೈಗೊಂಡು ಮನೆಗಳ ಪ್ರತಿಯೊಂದು ಮಾಹಿತಿಯನ್ನು ಪಡೆದರು.

ದಿನಾಂಕ 02-07-2022 ರಂದು ಕುರುಬದೊಡ್ಡಿ ಗ್ರಾಮದಲ್ಲಿ ಸ್ವಯಂ ಸೇವಕರು ಮನೆಗಳಿಗೆ ತೆರಳಿ ಎಲ್ಲಾ ಮಾಹಿತಿಗಳನ್ನು ಪಡೆದು ಸರ್ವೆ ಕಾರ್ಯವನ್ನು ಮಾಡಿದರು.

ದಿನಾಂಕ 03-07-2022 ರಂದು ಬಾಯಿದೊಡ್ಡಿ ಗ್ರಾಮದಲ್ಲಿ ಸಮೀಕ್ಷೆ ಕಾರ್ಯವನ್ನು ಕೈಗೊಳ್ಳಲಾಯಿತು. ಅನೀಮಿಯಾ ಮುಕ್ತ ಭಾರತ ಅಭಿಯಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಗ್ರಾಮದ ಅನೇಕ ಜನರು ಸಹಕಾರವನ್ನು ನೀಡಿದರು.

ದಿನಾಂಕ 04-07-2022 ರಂದು ಕಡಗಂದೊಡ್ಡಿ ಗ್ರಾಮದಲ್ಲಿ ಸರ್ವೆ ಕಾರ್ಯವನ್ನು ಮಾಡಲಾಯಿತು. ಸ್ವಯಂ ಸೇವಕರು ತೆರಳಿ ಹಲವಾರು ಮಾಹಿತಿಯನ್ನು ಕಲೆಹಾಕಿದರು.

ದಿನಾಂಕ 05-07-2022 ರಂದು ಕಡಗಂದೊಡ್ಡಿ ಗ್ರಾಮದಲ್ಲಿ ಸರ್ವೆ ಕಾರ್ಯವನ್ನು ಮಾಡಲಾಯಿತು. ಸ್ವಯಂ ಸೇವಕರು ತೆರಳಿ ಹಲವಾರು ಮಾಹಿತಿಯನ್ನು ಕಲೆಹಾಕಿದರು. ಶಾಲೆ ಮತ್ತು ಗ್ರಾಮದಲ್ಲಿ ಶ್ರಮದಾನವನ್ನು ಮಾಡಲಾಯಿತು.

ದಿನಾಂಕ 06-07-2022 ರಂದು ಬಾಯಿದೊಡ್ಡಿ ಸರಕಾರಿ ಪ್ರೌಢಶಾಲೆಯಲ್ಲಿ ಸಮರೋಪ ಸಮಾರಂಭವನ್ನು ಮಾಡಲಾಯಿತು. ಸಮೀಕ್ಷೆ ಕಾರ್ಯವನ್ನು ಮುಗಿಸಿ ಸಾಯಂಕಾಲ ವಾರ್ಷಿಕ ವಿಶೇಷ ಶಿಬಿರದ ಮುಕ್ತಾಯ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಕಾಲೇಜಿನ ಉಪ ಪ್ರಾಚಾರ್ಯರಾದ ಡಾ. ಆಂಜನೇಯ ಓಬಳೇಶ ಇವರು ಅಧ್ಯಕ್ಷತೆಯನ್ನು ವಹಿಸಿ ಮಾತನಾಡುತ್ತಾ ಎನ್.ಎಸ್.ಎಸ್.ನ ಧ್ಯೇಯ-ಧೋರಣೆಗಳು ವಿದ್ಯಾರ್ಥಿಗಳ ವ್ಯಕ್ತಿತ್ವವನ್ನು ವಿಕಸನಗೊಳಿಸಲಿಕ್ಕೆ ಸಹಾಯ ಮಾಡುತ್ತದೆ ಎಂದು ಹೇಳಿದರು. ಗ್ರಾಮದ ಮುಖಂಡರಾದ ಶ್ರೀ ನರಸಣ್ಣ ಇವರು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ತನುಶ್ರೀ ನಿರೂಪಿಸಿದರು. ಸ್ವಾಗತವನ್ನು ಭಾಗ್ಯಶ್ರೀ ಮಾಡಿದರು. ವಾರ್ಷಿಕ ವಿಶೇಷ ಶಿಬಿರದ ವರದಿ ವಾಚನವನ್ನು ಚೆನ್ನಾರೆಡ್ಡಿ, ಎನ್.ಎಸ್.ಎಸ್. ಅಧಿಕಾರಿ ಮಾಡಿದರು. ವಂದನಾರ್ಪಣೆಯನ್ನು ಗೌತಮಿ ಮಾಡಿದರು. ಕೊನೆಗೆ ವಿದಾಯ ಗೀತೆಯನ್ನು ಹಾಡಿ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಲಾಯಿತು.

ಸಾರ್ವಜನಿಕ ಶಿಕ್ಷಣ ಸಂಸ್ಥೆಯ

# ಲಕ್ಷ್ಮೀ ವೆಂಕಟೇಶ ದೇಸಾಯಿ ಮಹಾವಿದ್ಯಾಲಯ

# ರಾಯಚೂರು-584103.

## ಎನ್.ಎಸ್.ಎಸ್. ವಿಶೇಷ ಶಿಬಿರ 2022-23

## ಸಿದ್ರಾಂಪೂರು, ತಾ/ಜಿ: ರಾಯಚೂರು.

ದಿನಾಂಕ 09-10-2023 [illegible]

ದಿನಾಂಕ 10-10-2023 [illegible]

ದಿನಾಂಕ [illegible]

ತಾರಾನಾಥ ಶಿಕ್ಷಣ ಸಂಸ್ಥೆಯ

# ಲಕ್ಷ್ಮೀ ವೆಂಕಟೇಶ ದೇಸಾಯಿ ಮಹಾವಿದ್ಯಾಲಯ

# ರಾಯಚೂರು-584103.

## ಎನ್.ಎಸ್.ಎಸ್. ವಿಶೇಷ ಶಿಬಿರ 2022-23

## ಸಿದ್ರಾಂಪೂರು, ತಾ/ಜಿ: ರಾಯಚೂರು.

ದಿನಾಂಕ 09-10-2023 ರಂದು ಎಲ್.ವಿ.ಡಿ. ಮಹಾವಿದ್ಯಾಲಯದಿಂದ ಸಿದ್ರಾಂಪೂರು ಗ್ರಾಮದಲ್ಲಿ ವಾರ್ಷಿಕ ವಿಶೇಷ ಶಿಬಿರವನ್ನು ವಿಜ್ಞಾನ ಮತ್ತು ವೈಜ್ಞಾನಿಕ ಮನೋಭಾವಕ್ಕಾಗಿ ಯುವಕರು ಎಂಬ ಧ್ಯೇಯದೊಂದಿಗೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮ ಉದ್ಘಾಟನೊಂದಿಗೆ ಚಾಲನೆ ದೊರೆಯಿತು. ಉದ್ಘಾಟನೆಯನ್ನು ಡಾ. ಶ್ರೀನಿವಾಸ ರಾಯಚೂರ್‌ಕರ ಇವರು ನೆರೆವೇರಿಸಿದರು. ಮುಖ್ಯ ಅತಿಥಿಗಳಾಗಿ ಗ್ರಾಮದ ಮುಖಂಡರಾದ ಶರೀ ನರಸಿಂಹಲು ನಾಯಕ, ಅಧ್ಯಕ್ಷರು, ಎಸ್.ಡಿ.ಎಂ.ಸಿ. ಸಿದ್ರಾಂಪೂರು ಇವರು ಉಪಸ್ಥಿತರಿದ್ದರು. ಈ ಕಾರ್ಯಕ್ರಮ ಎನ್‌ಎಸ್‌ಎಸ್ ಗೀತೆಯೊಂದಿಗೆ ಪ್ರಾರಂಭವಾಯಿತು.ಲ ಈ ಗೀತೆಯನ್ನು ಸ್ವಯಂ ಸೇವಕರಾದ ಐಶ್ವರ್ಯ ಮತ್ತು ಅಂಜಲಿಯವರು ಹಾಡಿದರು. ಕಾರ್ಯಕ್ರಮ ನಿರ್ವಹಣೆಯನ್ನು ಆಕಾಶ ಇವರು ಮಾಡಿದರು. ವಂದನಾರ್ಪಣೆಯನ್ನು ವೀರೇಶ ನಡೆಸಿಕೊಟ್ಟರು. ಪ್ರಾಸ್ತಾವಿಕ ನುಡಿಗಳನ್ನು ಎನ್‌ಎಸ್‌ಎಸ್ ಅಧಿಕಾರಿ ಚೆನ್ನಾರೆಡ್ಡಿ ಇವರು ಹೇಳಿದರು. ಸ್ವಾಗತವನ್ನು ಪ್ರಿಯಾಂಕ ಇವರು ಮಾಡಿದರು.

ದಿನಾಂಕ 10-10-2023 ರಂದು ಮಂಗಳವಾರ 15 ವರ್ಷ ಮೇಲ್ಪಟ್ಟು ಮತ್ತು 29 ವರ್ಷ ವಯಸ್ಸಿನೊಳಗಿನ ಯುವಕರ ಸಮೀಕ್ಷೆಯನ್ನು ನಡೆಸಲಾಯಿತು. ಸಾಯಂಕಾಲ ವಿಶೇಷ ಉಪನ್ಯಾಸವನ್ನು ಹಮ್ಮಿಕೊಳ್ಳಲಾಗಿತ್ತು. ಭ್ರಷ್ಟಾಚಾರ ನಿರ್ಮೂಲನೆಯಲ್ಲಿ ಯುವಕರ ಪಾತ್ರ ವಿಷಯದ ಕುರಿತು ಡಾ. ಕೃಷ್ಣನಾಯಕ ಇವರು ರಾಜ್ಯಶಾಸ್ತ್ರ ಸಹಾಯಕ ಪ್ರಾಧ್ಯಾಪಕರು ಮಾತನಾಡುತ್ತ ಇಂದಿನ ದಿವಸ ನಮ್ಮ ದೇಶದಲ್ಲಿ ಭ್ರಷ್ಟಾಚಾರ ಎಲ್ಲ ಕ್ಷೇತ್ರದಲ್ಲಿ ತಾಂಡವವಾಡುತ್ತಿದೆ. ಅದನ್ನು ತಡೆಗಟ್ಟುವ ಶಕ್ತಿ ನಿಮ್ಮಂತಹ ಯುವಕರಲ್ಲಿ ಇದೆ. ಯುವಕರು ಎಚ್ಚೆತ್ತರೆ ದೇಶದ ದಿಕ್ಕನ್ನೇ ಬದಲಾವಣೆ ಮಾಡಬಹುದು. ಎಲ್ಲಿಯವರಿಗೆ ಯುವಕರು ಜಾಗೃತರಾಗುವುದಿಲ್ಲವೋ ಅಲ್ಲಿಯವರೆಗೆ ನಮ್ಮ ದೇಶ ಅಭಿವೃದ್ಧಿಯನ್ನು ಹೊಂದಲು ಸಾಧ್ಯವಿಲ್ಲ ಎಂದು ಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಣಿಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ಮಂಜುನಾಥ ಇವರು ವಹಿಸಿಕೊಂಡಿದ್ದರು. ಕಾರ್ಯಕ್ರಮವನ್ನು ನವೀನ ನಿರೂಪಿಸಿದರು. ಎನ್‌ಎಸ್‌ಎಸ್ ಗೀತೆಯನ್ನು ಸ್ವಾತಿ ಇವರು ನಡೆಸಿಕೊಟ್ಟರು. ಸ್ವಾಗತವನ್ನು ಸಿದ್ದಮ್ಮ ಮಾಡಿದರು. ವಂದನಾರ್ಪಣೆಯನ್ನು ಆಕಾಶ ಇವರು ಮಾಡಿದರು.

ದಿನಾಂಕ 11-10-2023 ರಂದು ಬುಧುವಾರ ಗ್ರಾಮದಲ್ಲಿ ಪ್ಲಾಸ್ಟಿಕ್ ನಿಷೇಧ ಕುರಿತು ಜಾಥಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಸಿದ್ರಾಂಪೂರು ಗ್ರಾಮದಲ್ಲಿ ಮನೆ ಮನೆಗೆ ತೆರಳಿ ಪ್ಲಾಸ್ಟಿಕ್‌ನಿಂದ

ಆಗುವ ದುಷ್ಪಾರಿಣಾಮಗಳನ್ನು ಜನರಿಗೆ ತಿಳಿಸಲಾಯಿತು. ಸಂಜೆ ವಿಶೇಷ ಉಪನ್ಯಾಸವನ್ನು ಹಮ್ಮಿಕೊಳ್ಳಲಾಗಿತ್ತು. ವಿದ್ಯಾರ್ಥಿಗಳಿಗಾಗಿ ದೈಹಿಕ ಸದೃಢತೆಯ ಮಹತ್ವದ ಕುರಿತು ಕಾಲೇಜಿನ ದೈಹಿಕ ನಿರ್ದೇಶಕರಾದ ಪ್ರೊ. ಸಂಪತ್ ಅಂಗಡಿ ಇವರು ವಿದ್ಯಾರ್ಥಿಗಳು ಹೇಗೆ ದೈಹಿಕ ಸದೃಢತೆಯನ್ನು ಕಾಪಾಡಬೇಕು. ಮನಸ್ಸನ್ನು ಸದೃಢಗೊಳಿಸಲು ದಿನಾಲು ವ್ಯಾಯಾಮವನ್ನು ಮಾಡಬೇಕು. ಹಾಗೆಯೇ ಮನಸ್ಸನ್ನು ಏಕಾಗ್ರತೆಯಿಂದ ಇರಲು ದೈಹಿಕ ಶ್ರಮ ಬಹಳ ಅವಶ್ಯವಾಗಿರುತ್ತದೆ ಎಂದು ಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಭೌತಶಾಸ್ತ್ರ ಸಹಾಯಕ ಪ್ರಾಧ್ಯಾಪಕರಾದ ಡಾ. ಚಕ್ರಧರ ಇವರು ವಹಿಸಿದ್ದರು. ಕಾರ್ಯಕ್ರಮವನ್ನು ಪ್ರಾಣೇಶ ನಿರೂಪಿಸಿದರು. ಸ್ವಾಗತವನ್ನು ಅಂಜಲಿ ಇವರು ಮಾಡಿದರು. ವಂದನಾರ್ಪಣೆಯನ್ನು ಮೌನೇಶ ಇವರು ಮಾಡಿದರು.

ದಿನಾಂಕ 12–10–2023 ರಂದು ಗುರುವಾರ ಗ್ರಾಮದ ಸರಕಾರಿ ಶಾಲೆಯಲ್ಲಿ ಸಸಿಗಳನ್ನು ನೆಡುವ ಮೂಲಕ ಪರಿಸರದ ಜಾಗೃತಿಯನ್ನು ಮಾಡಲಾಯಿತು. ನಂತರ ಗ್ರಾಮದ ಓಣಿಗಳಲ್ಲಿ ಶ್ರಮದಾನವನ್ನು ಕೂಡ ಮಾಡಲಾಯಿತು. ಸಂಜೆ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಏರ್ಪಡಿಸಲಾಯಿತು. ಜೀವ ವೈವಿಧ್ಯತೆಯ ಮಹತ್ವ ವಿಷಯ ಕುರಿತು ಉಪನ್ಯಾವನ್ನು ಕಾಲೇಜಿನ ಸಹ ಪ್ರಾಧ್ಯಾಪಕರಾದ ಮೆಹಮೂದ್ ಟಿ. ಇವರು ಮಾತನಾಡುತ್ತ ಜೀವ ವೈವಿಧ್ಯತೆಯ ಮಹತ್ವ ಕುರಿತು ಸವಿವರವಾಗಿ ಹೇಳಿದರು. ಅದರ ಹುಟ್ಟು, ಬೆಳವಣಿಗೆ, ಜೀವ ವೈವಿಧ್ಯತೆಯನ್ನು ನಾವು ಹೇಗೆ ಕಾಪಾಡಬೇಕು, ಅದರ ಜವಾಬ್ದಾರಿ ಏನಿದೆ ಎಂದು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಡಾ. ಪ್ರಶಾಂತಕುಮಾರ ಇವರು ವಹಿಸಿದ್ದರು. ನಿರೂಪಣೆಯನ್ನು ಐಶ್ವರ್ಯ ಇವರು ಮಾಡಿದರು. ಸ್ವಾಗತವನ್ನು ಪ್ರದೀಪ ಇವರು ನಡೆಸಿಕೊಟ್ಟರು. ವಂದನಾರ್ಪಣೆಯನ್ನು ಅಯ್ಯಪ್ಪ ಇವರು ಮಾಡಿದರು.

ದಿನಾಂಕ 13–10–2023 ರಂದು ಶುಕ್ರವಾರ ಗ್ರಾಮದಲ್ಲಿ ಪೌಷ್ಟಿಕ ಆಹಾರದ ಬಗ್ಗೆ ಬೀದಿ ಬೀದಯಲ್ಲಿ ಜಾಥಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮಕ್ಕೆ ರಾಯಚೂರು ವಿಶ್ವವಿದ್ಯಾಲಯ, ರಾಯಚೂರು ಸಮಾಜಕಾರ್ಯ ವಿಭಾಗದ ಅತಿಥಿ ಉಪನ್ಯಾಸಕರು ಹಾಗೂ ರಾಯಚೂರು ವಿಶ್ವವಿದ್ಯಾಲಯ ರಾಯಚೂರು ಎನ್.ಎಸ್.ಎಸ್. ಘಟಕದ ಕಾರ್ಯಕ್ರಮಾಧಿಕಾರಿಯಾದ ಬಜಾರಪ್ಪ ಇವರು ಇದರ ನೇತೃತ್ವವನ್ನು ವಹಿಸಿ ಘೋಷಣೆಗಳನ್ನು ಕೂಗುತ್ತಾ ಗ್ರಾಮದಲ್ಲಿ ಪೌಷ್ಟಿಕ ಆಹಾರದ ಮಹತ್ವವನ್ನು ತಿಳಿಕೊಟ್ಟರು. ಹಾಗೆಯೇ ಎಲ್ಲಾ ಸ್ವಯಂ ಸೇವಕರಿಗೆ ಇದರ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನೀಡಿದರು.

ಸಾಯಂಕಾಲ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಜನಸಾಮಾನ್ಯರಲ್ಲಿ ವಿಜ್ಞಾನ ಈ ವಿಷಯದ ಕುರಿತು ಕಾಲೇಜಿನ ಪ್ರಾಣಿಶಾಸ್ತ್ರ ವಿಭಾಗದ ಸಹಾಯದ ಪ್ರಾಧ್ಯಾಪಕರಾದ ಪ್ರೊ. ಹನುಮಂತ್ರಾಯ ಇವರು ವಿದ್ಯಾರ್ಥಿಗಳಿಗೆ ವಿಜ್ಞಾನದ ಬಗ್ಗೆ ತಿಳುವಳಿಕೆಯನ್ನು ಮೂಡಿಸಿದರು. ಪ್ರತಿನಿತ್ಯ ನಮ್ಮ ಜೀವನದಲ್ಲಿ ವಿಜ್ಞಾನವನ್ನು ನಾವು ಅಳವಡಿಸಿಕೊಳ್ಳುತ್ತೇವೆ. ವೈಜ್ಞಾನಿಕ ಅರವು ಇಲ್ಲದಿದ್ದರೆ ನಾವು ಮೂಢನಂಬಿಕೆಗಳಿಗೆ ಬಲಿಯಾಗಿ ಅನಾಹುತಗಳನ್ನು ಎದುರಿಸಬೇಕಾಗುತ್ತದೆ, ವಿಜ್ಞಾನವು ನೈಜತೆಯನ್ನು ತಿಳಿಸಿಕೊಡುತ್ತದೆ ಎಂದು ಹೇಳಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಣಿಶಾಸ್ತ್ರದ ಸಹಾಯಕ

ಪ್ರಾಧ್ಯಾಪಕರಾದ ಡಾ. ಶಿವರಾಜ ಇವರು ವಹಿಸಿದ್ದರು. ಕಾರ್ಯಕ್ರಮದ ನಿರ್ವಹಣೆಯನ್ನು ಶಾಂತಿ ಇವರು ಮಾಡಿದರು. ಸ್ವಾಗತವನ್ನು ವೀರೇಶ ಇವರು ಮಾಡಿದರು. ವಂದನಾರ್ಪಣೆಯನ್ನು ರೇಣುಕಾ ಮಾಡಿದರು.

ದಿನಾಂಕ 14-10-2023 ರಂದು ಶನಿವಾರ ಗ್ರಾಮದಲ್ಲಿ ಶಾಲೆ ಮತ್ತು ಊರಿನ ಪ್ರಮುಖ ಸ್ಥಳಗಳಲ್ಲಿ ಶ್ರಮದಾನವನ್ನು ಹಮ್ಮಿಕೊಳ್ಳಲಾಗಿತ್ತು. ಸಾಯಂಕಾಲ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದ ವಿಷಯ ಎನ್.ಎಸ್.ಎಸ್ ಧ್ಯೇಯೋದ್ದೇಶಗಳು, ಉಪನ್ಯಾಸಕರಾಗಿ ಎಸ್.ಎಸ್.ಎಂ. ಕಾಲೇಜಿನ ಉಪನ್ಯಾಸಕರಾದ ಶ್ರೀ. ಅಳ್ಳಪ್ಪ ಇವರು ಮಾತನಾಡುತ್ತಾ ಎನ್.ಎಸ್.ಎಸ್. ಧ್ಯೆಯೋದ್ದೇಶಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ವಿದ್ಯಾರ್ಥಿಗಳಿಗೆ ತಿಳಿಸಿ ಎನ್.ಎಸ್.ಎಸ್. ಸೇರುವುದರಿಂದ ಏನೆಲ್ಲಾ ಲಾಭಗಳಿವೆ, ಇವು ಎಲ್ಲವನ್ನು ಕಲಿಯಲು ಇಂತಹ ಎನ್.ಎಸ್.ಎಸ್. ಶಿಬಿರಗಳು ಕಾರಣ ಎಂದು ಹೇಳಿದರು. ಅಧ್ಯಕ್ಷತೆಯನ್ನು ಶ್ರಿ. ಮಾಲತೇಶ ಇವರು ವಹಿಸಿಕೊಂಡಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ರೇಣುಕಾ ಇವರು ಮಾಡಿದರು. ಸ್ವಾಗತವನ್ನು ರಾಧಾ ಮಾಡಿದರು, ವಂದನಾರ್ಪಣೆಯನ್ನು ನಾಗರಾಜ ಮಾಡಿದರು.

ದಿನಾಂಕ 15-10-2023 ರಂದು ಶನಿವಾರ ಗ್ರಾಮದಲ್ಲಿ ಶ್ರಮದಾನವನ್ನು ಮಾಡಿದರು. ಸಾಯಂಕಾಲ ವಾರ್ಷಿಕ ವಿಶೇಷ ಶಿಬಿರದ ಸಮರೋಪ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಶ್ರೀ. ಮಾಲತೇಶ ಇವರು ವಹಿಸಿಕೊಂಡಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಉಪ ಪ್ರಾಚಾರ್ಯರಾದ ಡಾ. ಆಂಜನೇಯ ಓಬಳೇಶ ಇವರು ವಹಿಸಿಕೊಂಡು ಕಾರ್ಯಕ್ರಮದ ಬಗ್ಗೆ ಮಾತನಾಡುತ್ತಾ ಎನ್.ಎಸ್.ಎಸ್ ಎಂದರೆ ಶಿಸ್ತು, ಸಂಯಮ, ವ್ಯಕ್ತಿತ್ವ ವಿಕಸನ ಮತ್ತು ಎಲ್ಲಾ ವಿಷಯಗಳನ್ನು ಇದು ಕಲಿಸಿಕೊಡುತ್ತದೆ. ಅಷ್ಟೇ ಅಲ್ಲ ನಾವು ಸಮಾಜದ ಜೊತೆ ಬೆರತಾಗ ಸಮಾಜದಲ್ಲಿ ಇರುವ ಸಮಸ್ಯೆಗಳನ್ನು ತಿಳಿದುಕೊಳ್ಳುತ್ತಾ ಅವುಗಳನ್ನು ನಾವು ಮುಂದಿನ ಜೀವನದಲ್ಲಿ ಹೇಗೆ ಎದುರಿಸಬೇಕು ಎಂಬುದನ್ನು ಕಲಿಸುತ್ತದೆ. ಹಾಗೇ ಜೀವನದ ಪ್ರತಿಯೊಂದು ಪಾಠವನ್ನು ಕಲಿಯಲು ಇಂತಹ ಎನ್.ಎಸ್.ಎಸ್. ನಿಂದ ಸಾಧ್ಯ ಎಂದು ಹೇಳಿದರು. ಎನ್.ಎಸ್.ಎಸ್. ಕಾರ್ಯಕ್ರಮಾಧಿಕಾರಿಯಾದ ಚೆನ್ನಾರೆಡ್ಡಿ ಎಸ್. ಇವರು ವಾರ್ಷಿಕ ವಿಶೇಷ ಶಿಬಿರದ ವರದಿ ವಾಚನವನ್ನು ಮಾಡಿದರು. ಎನ್.ಎಸ್.ಎಸ್. ಗೀತೆಯನ್ನು ಅಂಜಲಿ ಮತ್ತು ಐಶ್ವರ್ಯ ನಡೆಸಿಕೊಟ್ಟರು. ಸ್ವಾಗತವನ್ನು ಮಲ್ಲಿಕಾರ್ಜುನ ಮಾಡಿದರು. ವಂದನಾರ್ಪಣೆಯನ್ನು ಸ್ವಾತಿ ಮಾಡಿದರು. ಕೊನೆಗೆ ಎನ್.ಎಸ್.ಎಸ್. ಶಿಬಿರದ ವಿದಾಯ ಗೀತೆಯನ್ನು ಹಾಡಿದರು. ಇಲ್ಲಿಗೆ ವಿಶೇಷ ಶಿಬಿರವನ್ನು ಮುಕ್ತಾಯಗೊಳಿಸಲಾಯಿತು.

# ವರದಿ

ದಿನಾಂಕ: 25-03-2019.

ನಮ್ಮ ಮಹಾವಿದ್ಯಾಲಯದ ಇತಿಹಾಸ ವಿಭಾಗದಿಂದ ಐತಿಹಾಸಿಕ ಸ್ಥಳವನ್ನು ವೀಕ್ಷಿಸಲು ದಿನಾಂಕ 23-03-2019 ರಂದು ಹಂಪಿಗೆ ಭೇಟಿ ನೀಡಲಾಯಿತು. ಬಿ.ಎ. ಐದನೇಯ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಹಂಪಿಯ ವಿರುಪಾಕ್ಷ ದೇವಾಲಯ, ವಿಠ್ಠಲ ಸ್ವಾಮಿ ದೇವಾಲಯ, ಹಜಾರ ರಾಮಸ್ವಾಮಿ ದೇವಾಲಯ, ಕಲ್ಲಿನ ರಥ, ಆನೆ ಲಾಯ, ಕಮಲ ಮಹಲ್, ಮುಂತಾದ ಪ್ರಮುಖ ಸ್ಮಾರಕಗಳ ಬಗ್ಗೆ ಮಹತ್ವವನ್ನು ವಿದ್ಯಾರ್ಥಿಗಳಿಗೆ ತಿಳಿಸಲಾಯಿತು. ಇದರಿಂದ ಐತಿಹಾಸಿಕ ಸ್ಮಾರಕಗಳ ಪರಂಪರೆ ಸಂಸ್ಕೃತಿಯ ಬಗ್ಗೆ ತಿಳಿಸಿ ಅವರಲ್ಲಿ ಸ್ಮಾರಕಗಳ ರಕ್ಷಣೆ ಮತ್ತು ಪೋಷಣೆಯ ಬಗ್ಗೆ ಹೇಳಲಾಯಿತು.

ಐತಿಹಾಸಿಕ ಸ್ಮಾರಕಗಳನ್ನು ವೀಕ್ಷಿಸುವುದರ ಮೂಲಕ ವಿದ್ಯಾರ್ಥಿಗಳಿಗೆ ಜಾಗೃತಿಯನ್ನು ಮೂಡಿಸಲಾಯಿತು. ಇದರಿಂದ ಇತಿಹಾಸದ ಬಗ್ಗೆ ಆಸಕ್ತಿಯನ್ನು ಮೂಡಿಸುವುದರ ಜೊತೆಗೆ ಅವರಲ್ಲಿ ರಕ್ಷಣೆಯ ಅರಿವನ್ನು ತಿಳಿಸಲಾಯಿತು. ಈ ಒಂದು ದಿನದ ಪ್ರವಾಸಕ್ಕೆ ನಮ್ಮ ಮಹಾವಿದ್ಯಾಲಯದ ಕನ್ನಡ ವಿಭಾಗದ ಸಹ ಪ್ರಾಧ್ಯಾಪಕರಾದ ಡಾ. ಶಕುಂತಲಾ ಗೋಪಶೆಟ್ಟಿ ಹಾಗೂ ಇತಿಹಾಸ ವಿಭಾಗದ ಮುಖ್ಯಸ್ಥರಾದ ಶ್ರೀ. ಚೆನ್ನಾರೆಡ್ಡಿ ಇವರು ಪಾಲ್ಗೊಂಡಿದ್ದರು.

ತಾರಾನಾಥ ಶಿಕ್ಷಣ ಸಂಸ್ಥೆಯ

# ಲಕ್ಷ್ಮೀ ವೆಂಕಟೇಶ ದೇಸಾಯಿ ಮಹಾವಿದ್ಯಾಲಯ, ರಾಯಚೂರು- 584 103

(ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಸಂಯೋಜಿತ, ನ್ಯಾಕ್ ಸಂಸ್ಥೆಯಿಂದ "ಬಿ" ಶ್ರೇಣಿ ಪಡೆದಿರುತ್ತದೆ)

ಪ್ರಾಚಾರ್ಯರ ಕಾರ್ಯಾಲಯ

ಡಾ.ವೆಂಕಟೇಶ ಬಿ.ದೇವರು, ಎಂ.ಎಸ್ಸಿ.,ಪಿಹೆಚ್‌ಡಿ.,ಎಂಬಿಎ.
ಪ್ರಾಚಾರ್ಯರು.

ದೂರವಾಣಿ : ( 08532)- 240286, 240707
ಫ್ಯಾಕ್ಸ : +918532 240707
ಇ-ಮೇಲ್ : lvdrcr@gmail.com
ವೆಬ್ ಸೈಟ್ : lvdcollege.com

ಕ್ರ.ಸಂ.:ಎಲ್‌ವಿಡಿ/ಎನ್.ಎಸ್.ಎಸ್/ಎನ್‌ಪಿ/2023-24 ದಿನಾಂಕ: 13-11-2023.

ಗೆ,
ಶ್ರೀ. ಖಾದ್ರಿ ನರಸಿಂಹಯ್ಯ
ಪ್ರಾದೇಶಿಕ ಅಧಿಕಾರಿಗಳು,
ಎನ್.ಎಸ್.ಎಸ್ ಪ್ರಾದೇಶಿಕ ಕಛೇರಿ,
ಬೆಂಗಳೂರು.

ಮಾನ್ಯರೆ,

ವಿಷಯ:- ಔಪಚಾರಿಕ ಶಿಕ್ಷಣ ಹಾಗೂ ನಿಯಮಿತ ಉದ್ಯೋಗದಲ್ಲಿಲ್ಲದ ಯುವಕರ ಸಮೀಕ್ಷೆ ಮಾಡಿದ 50 ಫಾರಂಗಳನ್ನು ಸಲ್ಲಿಸುವ ಬಗ್ಗೆ.

ಉಲ್ಲೇಖ:- ರಾಯಚೂರು ವಿಶ್ವವಿದ್ಯಾಲಯ ಎನ್.ಎಸ್.ಎಸ್. ಕಾರ್ಯಕ್ರಮ ಅಧಿಕಾರಿಗಳ ಸಭೆ 2022/154. ದಿನಾಂಕ 12-07-2023.

*****

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ ಲಕ್ಷ್ಮೀ ವೆಂಕಟೇಶ ದೇಸಾಯಿ ಮಹಾವಿದ್ಯಾಲಯ, ರಾಯಚೂರು ಎನ್.ಎಸ್.ಎಸ್. ಘಟಕದಿಂದ ದಿನಾಂಕ 09-10-2023 ರಿಂದ 15-10-2023 ರ ವರೆಗೆ, ರಾಯಚೂರು ತಾಲ್ಲೂಕಿನ ಸಿದ್ರಾಂಪೂರು ಗ್ರಾಮದಲ್ಲಿ ವಾರ್ಷಿಕ ವಿಶೇಷ ಶಿಬಿರವನ್ನು ಏರ್ಪಡಿಸಲಾಗಿತ್ತು, ರಾಯಚೂರು ವಿಶ್ವವಿದ್ಯಾಲಯ ಎನ್.ಎಸ್.ಎಸ್. ಘಟಕದ ನಿರ್ದೇಶನದಂತೆ, ಈ ಗ್ರಾಮದಲ್ಲಿ "ಔಪಚಾರಿಕ ಶಿಕ್ಷಣ ಹಾಗೂ ನಿಯಮಿತ ಉದ್ಯೋಗದಲ್ಲಿಲ್ಲದ ಯುವಕರ ಸಮೀಕ್ಷೆ"ಯ ಕಾರ್ಯವನ್ನು ಕೈಗೊಳ್ಳಲಾಗಿದ್ದು, ಅದಕ್ಕೆ ಸಂಬಂಧಿಸಿದ ನಮೂನೆಗಳನ್ನು ಈ ಪತ್ರದ ಜೊತೆಗೆ ಸಲ್ಲಿಸುತ್ತಿದ್ದೇವೆ.

ಧನ್ಯವಾದಗಳೊಂದಿಗೆ,

ಎನ್.ಎಸ್.ಎಸ್. ಕಾರ್ಯಕ್ರಮಾಧಿಕಾರಿಗಳು.
PROGRAMME OFFICER
N.S.S. Unit
Laxmi Venkatesh Desai College
RAICHUR-584 103

ಪ್ರಾಚಾರ್ಯರು.
PRINCIPAL
L.V.D. College, RAICHUR-03.